**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.**

---

| | |
|---|---|
| ಸಿ.ಸಿ. ನಂಬರ್ | : 121/2024 |
| ಸಿ.ಡಬ್ಲೂ | : 04 |
| ಪಿ.ಡಬ್ಲೂ | : 03 |
| ಸಾಕ್ಷಿಯ ಹೆಸರು | : ನಿಂಗಪ್ಪ ಸಿದ್ದಪ್ಪ ಬಾವಿಕಟ್ಟಿ |
| ವಯಸ್ಸು | : 42 ವರ್ಷ |
| ಉದ್ಯೋಗ | : ಒಕ್ಕಲುತನ |
| ವಾಸ ಸ್ಥಳ | : ನವಲಗುಂದ |

ದಿನಾಂಕಃ 27/03/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯವಿಲ್ಲ. ಚಾಸಾ-1 ರವರ ಪರಿಚಯವಿದೆ. ಚಾಸಾ-5 ರವರ ಪರಿಚಯವಿಲ್ಲ.

2. ದಿನಾಂಕಃ 15-06-2023 ರಂದು ನವಲಗುಂದ ಪೊಲೀಸ ಠಾಣೆಯಲ್ಲಿ ನಾನು ಹಾಗೂ ಇನ್ನೊಬ್ಬ ವ್ಯಕ್ತಿ ರಕ್ತಮಯವಾದ 3 ಬಿಳಿ ಬಟ್ಟೆಗಳನ್ನು ಪೋಲೀಸರು ತೋರಿಸಿದ್ದು, ನಾವು ಅದನ್ನು ನೋಡಿರುತ್ತೇವೆ. ನಂತರ ಸದರಿ ಬಟ್ಟೆಗಳನ್ನು ಜಪ್ತಿ ಮಾಡಿ ಮ.01.00 ರಿಂದ 02.00 ಗಂಟೆಯವರೆಗೆ ಪಂಚನಾಮೆ ಮಾಡಿದ್ದು ನಾವು ಅದಕ್ಕೆ ಸಹಿ ಮಾಡಿರುತ್ತೇವೆ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು. ಸದರಿ ಬಟ್ಟೆಗಳು ಯಾವ ಕಾರಣಕ್ಕೆ ರಕ್ತಮಯವಾಗಿದ್ದವು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಸದರಿ ಬಟ್ಟೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುದ್ದೆ ಮಾಲು 3 ರಿಂದ 5 ಎಂದು ಗುರುತಿಸಲಾಗಿರುತ್ತದೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ನನ್ನ ಜೊತೆ ಚಾಸಾ-5 ರವರು ಸಹ ಹಾಜರಿದ್ದು, ಪಂಚನಾಮೆಗೆ ಸಹಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಸಮಕ್ಷಮ ಜಪ್ತಿ ಮಾಡಿದ ಬಟ್ಟೆಗಳು ಚಾಸಾ-6 ರವರಿಗೆ ಸಂಬಂಧಿಸಿದ್ದವು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ**

ನನಗೆ ಓದಲು ಬರುವುದಿಲ್ಲ. ನಿಪಿ-4 ರಲ್ಲಿರುವ ಅಂಶಗಳನ್ನು ನನಗೆ ಓದಿ ಹೇಳಿದ್ದು, ನಂತರ ನಾನು ಸಹಿ ಮಾಡಿರುತ್ತೇನೆ. ನಿಪಿ-4 ನ್ನು ನನ್ನ ಸಮಕ್ಷಮ ಬರೆಯಲಾಗಿರುತ್ತದೆ. ನನಗೆ ಚಾಸಾ-6 ರವರು ತುಂಬಾ ಪರಿಚಯಸ್ಥರು ಎಂದರೆ ಸರಿ. ದಿನಾಂಕಃ 15-06-2023 ರಂದು ನಿಪಿ-4 ರ ಕೆಲಸಕ್ಕೆ ಸಂಬಂಧಿಸಿ ಠಾಣೆಗೆ ಹೋಗಿರುತ್ತೇನೆ. ಚಾಸಾ-6 ರವರು ಹೇಳಿದ ಪ್ರಕಾರ ನಾನು ನಿಪಿ-4 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮುದ್ದೆ ಮಾಲು 3 ರಿಂದ 5 ಗಳು ಯಾರಿಗೆ ಸಂಬಂಧಿಸಿದ್ದವು ಎಂದು ನನಗೆ ಗೊತ್ತಿಲ್ಲ ಹಾಗೂ ಚಾಸಾ-6 ರವರು ಹೇಳಿದ ಮೇರೆಗೆ ಗೊತ್ತಾಗಿರುತ್ತವೆ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರದಿದ್ದರೂ ಸಹ ಚಾಸಾ-6 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**